ದಿನಾಂಕಃ 21.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀಸವಾಲುಃ</u> ಪ್ರತಿವಾದಿಪರ ವಕೀಲರಾದ ಶ್ರೀ ಅವರಿಂದ -

1. ನಾನು ಈಗಾಗಲೇ ನ್ಯಾಯಾಲಯದ ಹಾಜರುಪಡಿಸಿರುವ 75 ದಾಖಲಾತಿಗಳನ್ನು ಬಿಟ್ಟರೆ ನನ್ನ ಬಳಿ ಬೇರೆ ಯಾವ ದಾಖಲಾತಿಗಳು ಇಲ್ಲ. ನನ್ನ ತಂದೆ ಹೆಸರು ತಿಮ್ಮೇಗೌಡ. ಪಿ.ಡಬ್ಲ್ಯೂಃ 2 ಹಾಗೂ 3 ರವರ ತಂದೆ ಹೆಸರು ತಮ್ಮೇಗೌಡ. ಸಾಕ್ಷಿ ಮುಂದುವರಿದು ಪಿ.ಡಬ್ಲ್ಯೂಃ 2 ದಶರಥ ಅವರ ತಂದೆ ಹೆಸರು ತಿಮ್ಮೇಗೌಡ ಎಂದು ಹೇಳುತ್ತಾರೆ. ತಮೆಂೀಗೌಡ ಹಾಗೂ ತಿಮ್ಮೇಗೌಡ ಎಂಬ ಹೆಸರಿನವರು ನಮ್ಮ ಕುಟುಂಬ ಹಾಗೂ ಗ್ರಾಮದಲ್ಲಿ ಸಾಕಷ್ಟು ಇದ್ದಾರೆ ಎಂದರೆ ನಮ್ಮ ಕುಟುಂಬದಲ್ಲಿ ಮಾತ್ರ ಇದ್ದಾರೆ, ಊರಿನಲ್ಲಿ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

2. ನನ್ನ ತಂದೆ ತಿಮ್ಮೇಗೌಡ ಅವರ ತಾಯಿ ಹೆಸರು ಸುಬ್ಬಮ್ಮ. ಸುಬ್ಬಮ್ಮ ಅವರ ಗಂಡನ ಹೆಸರು ಹೊನಕೆರೆಗೌಡ ಎಂದರೆ ಸರಿಯಲ್ಲ. ತಮ್ಮೇಗೌಡ ಎಂದು ಸಾಕ್ಷಿ ನುಡಿಯುತ್ತಾರೆ. ಹೊನಕೆರೆಗೌಡರ ಪತ್ನಿ ಸುಬ್ಬಮ್ಮ ಇವರಿಗೆ ರಾಮಕೃಷ್ಣೇಗೌಡ ಹಾಗೂ ತಿಮ್ಮೇಗೌಡ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ನನ್ನ ತಂದೆಗೆ ಇಬ್ಬರು ಮಕ್ಕಳು. ಅಣ್ಣ ಮಾದೇಗೌಡರು ತೀರಿಕೊಂಡಿದ್ದು, ನಾನು ಎರಡನೇಯವನು. ನನ್ನ ಅಣ್ಣನ ಹೆಂಡತಿ ಇದ್ದಾರೆ. ಅವರು ಈಗ ಬೇರೆಯವರನ್ನು ಮದುವೆ ಆಗಿರುತ್ತಾರೆ. ಈ ಬಗ್ಗೆ ನಾನು ನನ್ನ ವಾದಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ಅದನ್ನು ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಅವರ ಅವಶ್ಯಕತೆ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

3. ನಾನು ನನ್ನ ಅಣ್ಣನ ಹೆಂಡತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರ್ಪಡೆ ಮಾಡದೆ ಇರುವುದರಿಂದ ಪ್ರಸ್ತುತ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಅವರ ಅವಶ್ಯಕತೆ ನಮಗೆ ಇಲ್ಲ ಆದ್ದರಿಂದ ಸೇರ್ಪಡೆ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನಗೂ ಹಾಗೂ ಪ್ರತಿವಾದಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

4. ನನಗೆ ಓದಲು ಬರೆಯಲು ಬರುತ್ತದೆ. ಸಾಕ್ಷಿದಾರರಿಗೆ ಒಂದು ಆರ್.ಟಿ.ಸಿ ತೋರಿಸಿ ಅದು ಸರ್ವೇ ನಂ.189, 1 ಎಕರೆ 36 ಗುಂಟೆ ಜಮೀನು ಹಾಗು ಸರ್ವೇ ನಂ.111/1 ಬಿ 4 ಗುಂಟೆಗಳು ಜಮೀನುಗಳು ನನ್ನ ತಾಯಿ ಸುಂದ್ರಮ್ಮ ಕೋಂ ತಿಮ್ಮೇಗೌಡ ಅವರ ಹೆಸರಿನಲ್ಲಿದ್ದು, ಸದರಿ ಜಮೀನುಗಳನ್ನು ನಾನು ಪ್ರಸ್ತುತ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಸದರಿ ಆರ್.ಟಿ.ಸಿ ಗಳನ್ನು ನಿಡಿ.1 ಹಾಗೂ 2 ಎಂದು ಗುರುತಿಸಲಾಯಿತು.

5. ನಾನು ಹಾಗೂ ನನ್ನ ತಾಯಿ ಸೇರಿ ದಿಃ 25.07.2007 ರಲ್ಲಿ ಸರ್ವೇ ನಂ.154/1 ರಲ್ಲಿ 1 ಎಕರೆ 6 ಗುಂಟೆ ಹಾಗೂ ಸರ್ವೇ ನಂ.155/1 ರಲ್ಲಿ 1 ಎಕರೆ ಜಮೀನನ್ನು ಪುಟ್ಟತಾಯಮ್ಮ ಅವರಿಗೆ ಮಾರಾಟ ಮಾಡಿದ್ದು, ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಜಮೀನುಗಳನ್ನು ಮಾರಾಟ ಮಾಡಿದ ದೃಢೀಕೃತ ನಕಲುಗಳನ್ನು ಸಾಕ್ಷಿಗೆ ತೋರಿಸಿದ್ದು, ಅದನ್ನು ಅವರು ಒಪ್ಪಿಕೊಂಡಿರುತ್ತಾರೆ. ಸದರಿ ಕ್ರಯಪತ್ರ ಜೆರಾಕ್ಸ್ ಪ್ರತಿಯಾದ್ದರಿಂದ ನಿಶಾನೆಗೊಳಪಡಿಸಿಲ್ಲ.

6. ದಿಃ 27.07.2010 ರಂದು ಸರ್ವೇ ನಂ.154/5 ರಲ್ಲಿ 20 ಗುಂಟೆ ಹಾಗೂ ಸರ್ವೇ ನಂ. 154/6 ರಲ್ಲಿ 24 ಗುಂಟೆ ಜಮೀನನ್ನು ಬಸವನಾಯಕ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ನನ್ನ ತಂದೆ ಮಾರಾಟ ಮಾಡಿದ್ದಾರೆ, ನಾನಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಅಣ್ಣನ ಹೆಂಡತಿ ನನ್ನ ಅಣ್ಣ ತೀರಿಹೋದ ನಂತರ ಭಾಗಾಂಶ ಕೇಳಿದ್ದಕ್ಕೆ

ಸದರಿ ಜಮೀನನ್ನು ಮಾರಾಟ ಮಾಡಿ ಅವರ ಭಾಗಾಂಶ ನೀಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿದಾರರಿಗೆ ಸದರಿ ಕ್ರಯಪತ್ರದಲ್ಲಿ ಕ್ರಯದಾರರಾಗಿ ಯಾರ ಹೆಸರು ನಮೂದಾಗಿರುತ್ತದೆ ಎಂದರೆ ಎಚ್.ಟಿ. ಭಾಸ್ಕರ್ ಅಂದರೆ ನನ್ನ ಹೆಸರು ನಮೂದಾಗಿರುತ್ತದೆ, ಅದನ್ನು ನನ್ನ ತಂದೆಯ ಹೇಳಿಕೆ ಮೇರೆಗೆ ನಾನು ಕ್ರಯ ಮಾಡಿಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಸ್ವತ್ತನ್ನಾಗಲಿ ಹಾಗೂ ಅದನ್ನು ಕ್ರಯಕ್ಕೆ ಪಡೆದವರನ್ನಾಗಲಿ ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

7. ದಿಃ 24.04.2017 ರಂದು ಚಂದ್ರಶೇಖರ್ ಎಂಬುವವರಿಗೆ ಸರ್ವೇ ನಂ. 133/1 ರಲ್ಲಿ 2 ಎಕರೆ 25 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಚುನಾವಣೆ ಖರ್ಚಿಗಾಗಿ ಮಾರಾಟ ಮಾಡಿದ್ದೇವೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸದರಿ ಜಮೀನನ್ನು ಮಾರಟ ಮಾಡಿ ಬಂದ ಹಣದಿಂದ ನಾನು ಚುನಾವಣೆ ಖರ್ಚಿಗಾಗಿ ಮಾಡಿದ ಸಾಲ ತೀರಿಸಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

8. ದಿಃ 26.03.2018 ರಲ್ಲಿ ಚಂದ್ರಶೇಖರ್ ಅವರು ಪುಟ್ಟಮ್ಮ ಎಂಬುವವರಿಗೆ ಸರ್ವೇ ನಂ. 133/1 ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಮಾರಾಟ ಮಾಡಿರಬಹುದು. ಸದರಿ ಪುಟ್ಟಮ್ಮ ಇವರನ್ನು ನಾವು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

9. ದಿಃ 27.09.2010 ರಂದು ಸರ್ವೇ ನಂ. 154/5 ರಲ್ಲಿ 5 ಗುಂಟೆ ಜಮೀನನ್ನು ಪುಟ್ಟಮ್ಮ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸದರಿ ಪುಟ್ಟಮ್ಮ ಇವರನ್ನು ನಾವು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಪುಟ್ಟಮ್ಮ ದಿಃ

03.04.2017 ರಂದು ಮಂಜುನಾಥ ಎಂಬುವವರಿಗೆ ಸದರಿ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

10. ದಿಃ 18.07.2017 ರಂದು ನಾನು, ನನ್ನ ತಾಯಿ ಹಾಗೂ ಮಕ್ಕಳು ಸೇರಿ ಸರ್ವೇ ನಂ. 111/1 ಎ ರಲ್ಲಿ 3 ಎಕರೆ 27 ಗುಂಟೆ ಜಮೀನನ್ನು ಕೆ. ಮಹೇಶ್ ಮಾರಟ ಮಾಡಿದ್ದೇವೆ ಎಂದರೆ ಸರಿ. ಸಾಲ ಇತ್ತು ಅದನ್ನು ತೀರಿಸಲು ಮಾರಾಟ ಮಾಡಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕೆ. ಮಹೇಶ್ ಇವರನ್ನು ನಾವು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

11. ನನ್ನ ಕುಟುಂಬದ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿ ಪ್ರತಿವಾದಿಯರ ಆಸ್ತಿ ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಜಮೀನು ಮಾರಾಟ ಮಾಡಿದ ವ್ಯಕ್ತಿಗಳಿಗೆ ಪ್ರಸ್ತುತ ದಾವೆಯಲ್ಲಿ ಸೇರಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ರಾಜಕೀಯ ಹಾಗೂ ದುಶ್ಚಟಕ್ಕೆ ಬಲಿಯಾಗಿ ನನಗೆ ಸೇರಿದ ಸ್ವತ್ತುಗಳನ್ನು ಮಾರಾಟ ಮಾಡಿಕೊಂಡು ಪ್ರತಿವಾದಿಗಳಿಗೆ ಸೇರಿದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹುಣಸೂರು.